# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 616

ಸದಸ್ಯರ ಹೆಸರು : **ಶ್ರೀ.ಎಸ್. ಎಲ್ ಭೋಜೇಗೌಡ (ಶಿಕ್ಷಕರಕ್ಷೇತ್ರ)**

ಉತ್ತರಿಸುವ ಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

ಉತ್ತರಿಸುವ ದಿನಾಂಕ : 23.12.2022

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ತೋಟಗಾರಿಕೆ ಇಲಾಖೆಯ ವ್ಯಾಪ್ತಿಗೆ ಬರುವ ವಿವಿಧ ಬಗೆಯ ಮರಗಳಾದ ತೆಂಗು ಮಾವು ಇನ್ನೂ ಮುಂತಾದ ಮರಗಳಿಗೆ ಇತ್ತೀಚಿಗೆ ಹೆಚ್ಚು ಕ್ರಿಮಿನಾಶಕ ಹುಳುಗಳು ಹರಡುತ್ತಿರುವುದರಿಂದ ಮರ ಗಿಡಗಳು ನಾಶ ವಾಗುತ್ತಿರುವುದನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮವನ್ನು ಕೈ ಗೊಂಡಿದೆ: | ರಾಜ್ಯದಲ್ಲಿ ತೋಟಗಾರಿಕೆ ಇಲಾಖೆಯ ವ್ಯಾಪ್ತಿಗೆ ಬರುವ ಮರಗಳಾದ ತೆಂಗು ಬೆಳೆಗೆ ಕೆಂಪುಮೂತಿ ಹುಳದಿಂದ ಹಾಗೂ ಮಾವು ಬೆಳೆಗೆ ಕಾಂಡಕೊರಕ ಕೀಟದಿಂದ ಮರಗಳು ನಾಶವಾಗುತ್ತಿರುವುದು ಗಮನಿಸಲಾಗುತ್ತಿದೆ. ಇದನ್ನು ತಡೆಗಟ್ಟಲು ಸರ್ಕಾರದಿಂದ ಈ ಕೆಳಗಿನಂತೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>1. ಅಧಿಕಾರಿಗಳು ಹಾಗೂ ತಜ್ಞರ ಸಹಯೋಗದೊಂದಿಗೆ ತರಬೇತಿ ಮೂಲಕ ಕ್ಷೇತ್ರಮಟ್ಟದಲ್ಲಿ ಸಮಗ್ರ ಕೀಟ ನಿರ್ವಹಣೆಯ ಬಗ್ಗೆ ರೈತರಿಗೆ ಅರಿವು ಮೂಡಿಸುವುದು<br>2. ಕೈಪಿಡಿ, ಕರಪತ್ರಗಳ ಮೂಲಕ ಹೆಚ್ಚಿನ ಪ್ರಚಾರ ಕೈಗೊಳ್ಳಲಾಗುತ್ತಿದೆ.<br>3. ತೆಂಗಿನ ತೋಟಗಳಲ್ಲಿ ಸಂಪೂರ್ಣವಾಗಿ ಒಣಗಿರುವ ಹಾಗೂ ಕೀಟ/ರೋಗ ಭಾದಿತ ತೆಂಗಿನ ಮರಗಳನ್ನು ಬುಡಸಮೇತ ತೆಗೆಯಲು ಶೇ.100 ರಂತೆ ಪ್ರತಿ ಗಿಡಕ್ಕೆ ರೂ.1,000/- ಗಳಂತೆ ಪ್ರತಿ ಹೆಕ್ಟೇರ್ ಗೆ ಗರಿಷ್ಠ 32 ಮರಗಳನ್ನು ತೆಗೆಯಲು ರೂ.32,000/- ಗಳಂತೆ ಸಹಾಯಧನವನ್ನು ನೀಡಲಾಗುತ್ತಿದೆ ಹಾಗೂ ಶೇ.50 ರಂತೆ 100 ಸಂಖ್ಯೆ ಸಸಿಗಳನ್ನು ಮರು ನಾಟಿಮಾಡಲು ಪ್ರತಿ ಹೆಕ್ಟೇರ್ ಗೆ ರೂ.4000 ಗಳನ್ನು ಸಹಾಯಧನ ನೀಡಲಾಗುತ್ತಿದೆ.<br>4. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಮಾವು ಮರುನಾಟಿ ಮತ್ತು ಪುನಶ್ಚೇತನ ಹಾಗೂ ನಿರ್ವಹಣೆ ಕಾರ್ಯಕ್ರಮದಡಿ ಪ್ರತಿ ಹೆಕ್ಟೇರ್‌ಗೆ ರೂ.20,000 ವರೆಗೆ ಸಹಾಯಧನ ನೀಡಲಾಗುತ್ತಿದೆ.<br>5. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಸಮಗ್ರ ಪೋಷಕಾಂಶ |

| | | |
|---|---|---|
| | | ಮತ್ತು ಸಮಗ್ರ ಪೀಡೆ ನಿರ್ವಹಣೆ ಕಾರ್ಯಕ್ರಮದಡಿ 4 ಹೆಕ್ಟೇರ್‌ಗೆ ಶೇ.30 ರಂತೆ ರೂ.4800 ಸಹಾಯಧನ ನೀಡಲಾಗುತ್ತಿದೆ.<br>6. ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆಯಡಿ ಸಸ್ಯ ಸಂರಕ್ಷಣೆ ಔಷಧಿಗಳಿಗೆ ಗರಿಷ್ಠ 1 ಹೆಕ್ಟೇರ್‌ಗೆ ಶೇ.75 ರಂತೆ ಸಾಮಾನ್ಯ ರೈತರಿಗೆ ರೂ.7500 ಪರಿಶಿಷ್ಟ ಪಂಗಡ/ಜಾತಿ ರೈತರಿಗೆ ಶೇ.90 ರಂತೆ ರೂ.9000 ಸಹಾಯಧನ ನೀಡಲಾಗುತ್ತಿದೆ. |
| ಆ) | ರಾಜ್ಯದಲ್ಲಿ ಕ್ರಿಮಿನಾಶಕ ಹುಳುಗಳ ತೊಂದರೆಯಿಂದ ಹಾನಿಗೊಳಗಾದ ರೈತರಿಗೆ ಎಷ್ಟು ಪ್ರಮಾಣದಲ್ಲಿ ಸರ್ಕಾರ ಪರಿಹಾರವನ್ನು ನೀಡಿದೆ? (ತಾಲ್ಲೂಕುವಾರು ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಕ್ರಿಮಿನಾಶಕ ಹುಳುಗಳ ತೊಂದರೆಯಿಂದ ಹಾನಿಗೊಳಗಾದ ರೈತರಿಗೆ ತೋಟಗಾರಿಕೆ ಇಲಾಖೆಯಿಂದ ಪರಿಹಾರವನ್ನು ನೀಡಿರುವುದಿಲ್ಲ.<br><br>ಆದರೆ, ಕೇಂದ್ರ ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ ಹಾಗೂ ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ ಮತ್ತು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಸಮಗ್ರ ಪೋಷಕಾಂಶ ಮತ್ತು ಸಮಗ್ರ ಪೀಡೆ ನಿರ್ವಹಣೆ ಕಾರ್ಯಕ್ರಮದಡಿ ಸಹಾಯಧನವನ್ನು ನೀಡಲಾಗುತ್ತಿದೆ. |

HORTI 593 HGM 2022

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು